**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಯವರ ನ್ಯಾಯಾಲಯ, ಕುಣಿಗಲ್**

**ಸಿ.ಸಿ ನಂ. 397/2016**

**ಪಿರ್ಯಾದಿಃ-** **ಶ್ರೀ ದಾಸೇಗೌಡ ಎಸ್ ವಿ. ಬಿನ್ ಲೇಟ್ ವಜ್ರಯ್ಯ , 43 ವರ್ಷ, ವಾಸಃ ಶೆಟ್ಟಿಗೆಹಳ್ಳಿ ಗ್ರಾಮ , ಕಸಬಾ ಹೋಬಳಿ , ಕುಣಿಗಲ್ ತಾಲ್ಲೂಕು .**

**ವಿರುದ್ಧ**

**ಆರೋಪಿಃ-** **ಶ್ರೀ ಪಾರ್ವತಿ, ಕೋ. ಲೇಟ್ ಬಾಳೇಗೌಡ, ವಾಸಃ ಬಾಳೇಗೌಡಪಾಳ್ಯ ಮಾವಿಕಟ್ಟೆ ದಖಲೆ ಬೀದನಗೆರೆ ಅಂಚೆ ಕೊತ್ತಗೆರೆ ಹೋಬಳಿ ಕುಣಿಗಲ್ ತಾಲ್ಲೂಕ್**

**ಅಪಾದನೆ**

ಆರೋಪಿಯಾದ ನೀವು ಪಿರ್ಯಾದಿಯಿಂದ . **4.00.000/–** ( ನಾಲ್ಕು ಲಕ್ಷ ರೂಗಳನ್ನು ಮಾತ್ರ) ಸಾಲ ಪಡೆದುಕೊಂಡು ಸದರಿ ಹಣದ ಮರುಪಾವತಿಗಾಗಿ ನೀವು ದಿಃ **23.11.2015** ರಂದು ರೂ. **4.00.000/–** ಗಳಿಗೆ ಕಾರ್ಪೊರೇಷನ್ ಬ್ಯಾಂಕ್ , ಕುಣಿಗಲ್ ಬ್ರಾಂಚ್ ನ ಚೆಕ್ ನಂ. **001779** ಚೆಕ್ಕನ್ನು ಕೊಟ್ಟಿದ್ದು ಅದನ್ನು ಪಿರ್ಯಾದಿ ಅವರ ಖಾತೆ ಇರುವ ಡಿ.ಸಿ.ಸಿ ಬ್ಯಾಂಕ್ ಲಿಮೆಟೆಡ್ ಬ್ಯಾಂಕ್ , ಕುಣಿಗಲ್ ಶಾಖೆಗೆ ನಗದೀಕರಣಕ್ಕಾಗಿ ಹಾಜರುಪಡಿಸಿದ್ದು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂಬ ಹಿಂಬರಹದೊಂದಿಗೆ ದಿಃ **24.11.2015** ರಂದು ಸದರಿ ಚೆಕ್ಕು ನಗದೀಕರಣವಾಗದೇ ಅಮಾನ್ಯವಾಗಿರುತ್ತದೆ. ಈ ವಿಚಾರವನ್ನು ಪಿರ್ಯಾದಿ ನಿಮಗೆ ತಮ್ಮ ವಕೀಲರ ಮೂಲಕ ದಿಃ **11.12.2015** ರಂದು ನೋಟಿಸು ಕೊಡಿಸಿ ತಿಳಿಸಿದ್ದು ಸದರಿ ನೋಟೀಸು ನಿಮಗೆ ಜಾರಿಯಾಗಿದ್ದರೂ ಕೂಡ ಪಿರ್ಯಾದಿಗೆ ನೀವು ಅವರಿಂದ ಪಡೆದ ಸಾಲ ವಾಪಸ್ಸು ಮಾಡಿರುವುದಿಲ್ಲ, ಆದ್ದರಿಂದ ಆರೋಪಿಯಾದ ನೀವು ಲಿಖಿತ ವರ್ಗಾವಣೆಗಳ ಅಧಿನಿಯಮ (ನೆಗೋಷಬಲ್ ಇನ್ಸ್‌ಟ್ರೂಮೆಂಟ್ ಆಕ್ಟ್) ಕಲಂ 138ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಎಂದು ನಿಮ್ಮ ಮೇಲೆ ಅಪಾದನೆ ಇದೆ.

ಪ್ರಶ್ನೆ1ಃ ನೀವು ಈ ಅಪರಾಧವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೇ?
ಉತ್ತರಃ

(ಮೇಲಿನಂತೆ ಆರೋಪಣೆ ಓದಿ ಹೇಳಿ ಆರೋಪಿ ನೀಡಿದ ಉತ್ತರ ಬರೆಯಲಾಗಿದೆ)

ದಿಃ 15.06.2017

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಕುಣಿಗಲ್

ಆರೋಪಿಯ ಸಹಿಃ